<u>ದಿನಾಂಕ **24-09-2019** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಆರ್ ಡಿ ಪಿ ವಕೀಲರಿಂದಃ</u>

**1.** ಸಾಕ್ಷಿಗೆ ಈಗ ಅಸಲು ದಾವಾ ನಂಬರ **113/2008** ರ ವಾದ ಪತ್ರ ಹಾಗೂ ವಕಾಲತನಾಮಾವನ್ನು ತೋರಿಸಿ ಅದರಲ್ಲಿರುವ ಹೆಬ್ಬಟ್ಟಿನ ಗುರುತು ಯಾರದು ಅಂತಾ ಕೇಳಲಾಗಿ ಸಾಕ್ಷಿ ಸದರಿ ಹೆಬ್ಬಟ್ಟಿನ ಗುರುತುಗಳನ್ನು ಸಾಕ್ಷಿ ಸೂಕ್ಷ್ಮವಾಗಿ **5** ನಿಮಿಷವಾಗಿ ನೋಡುತ್ತಾ ಸುಶೀಲಾರವರ ಹೆಬ್ಬಟ್ಟಿನ ಗುರುತು ಎಂದು ನುಡಿಯುತ್ತಾರೆ. ಸದರಿ ಅಸಲು ದಾವಾ ನಂಬರ **113/2008** ರ ವಾದ ಪತ್ರವನ್ನು ನಿಡಿ**-1** ಎಂತಲೂ ಹಾಗೂ ಹೆಬ್ಬಟ್ಟಿನ ಗುರುತುಗಳನ್ನು ನಿಡಿ**-1**(ಎ) ರಿಂದ ನಿಡಿ**-1**(ಇ) ಅಂತಾ ಗುರುತಿಸಲಾಯಿತು.

**2.** ನಿಡಿ**-1**(ಎ) ರಿಂದ ನಿಡಿ**-1**(ಇ) ರಲ್ಲಿರುವ ಹೆಬ್ಬಟ್ಟಿನ ಗುರುತಿಗೂ ನಿಪಿ**-6** ರಲ್ಲಿರುವ ಹೆಬ್ಬಟ್ಟಿನ ಗುರುತುಗಳು ಒಂದಕ್ಕೊಂಡು ಸಾಮ್ಯವಿರುವುದಿಲ್ಲ ಎಂದರೆ ಸಾಕ್ಷಿ ಒಂದೇ ತರಹ ಇರುತ್ತವೆ ಎಂದು ನುಡಿಯುತ್ತಾರೆ. ನಿಡಿ**-6** ರಲ್ಲಿರುವ ಹೆಬ್ಬಟ್ಟಿನ ಗುರುತುಗಳು ಸುಶೀಲಾ ಮಹಾದೇವ ಮಾಲಗಾರರವರದು ಅಲ್ಲದೆ ಇದ್ದರೂ ನಾನು, ನನ್ನ ಅಕ್ಕ ಹಾಗೂ ಸಾಕ್ಷಿದಾರರು ಸೇರಿಕೊಂಡು ನಿಡಿ**-6** ರ ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾವೆಲ್ಲರೂ ಸೇರಿಕೊಂಡು ಅದೇ ದಿನ ದಾಖಲೆಯನ್ನು ಸೃಷ್ಠಿಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸುಶೀಲಾ ಮಹಾದೇವ ಮಾಲಗಾರರವರು ಮೃತರಾದ ನಂತರ ನಾನು, ನನ್ನ ಅಕ್ಕ ಕೂಡಿಕೊಂಡು ಸುಶೀಲಾ ಮಹಾದೇವ ಮಾಲಗಾರರವರ ಆಸ್ತಿಯನ್ನು ಹೊಡೆದುಕೊಳ್ಳುವ ಉದ್ದೇಶದಿಂದ ನಿಪಿ**-6** ನ್ನು ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಉಳಿದ ಸಾಕ್ಷಿದಾರರುಗಳ ಸಹಿಗಳನ್ನು ನಿವೇ ಮಾಡಿರುತ್ತೀರಾ ಎಂದರೆ, ನಾನು ಯಾವುದೇ ಸಹಿ ಮಾಡಿರುವುದಿಲ್ಲ ನನ್ನ ಸಹಿಯನ್ನು ಮಾತ್ರ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ.ಹೆ.ಕೆ.ಸರಿ ಇದೆ.

(ಮಂಜುಳ ಬಿ.)
**1** ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಚಿಕ್ಕೋಡಿ.